"ನಿನ್ನ ಅಳತೆಗೆ ಹೊಲಿಸಿದ ಪ್ಯಾಂಟು, ಶರಟು, ಸೂಟು..."

ಅವನ ಬಾಯಿಂದ ಮುಂದೆ ಏನು ಬರಬಹುದೆಂದು ಡ್ರಿಯೋಲಿ ಕಾದು ನಿಂತ.

"ನಿನ್ನ ಕಾಲಿನ ಅಳತೆ ತೆಗೆದುಕೊಂಡು ಹೊಲಿಸಿದ ಅಪ್ಪಟ ಚರ್ಮದ ಶೂಗಳನ್ನು ಯಾವತ್ತಾದರೂ ಧರಿಸಿದ್ದೀಯಾ?"


"ಇಲ್ಲ." ಡ್ರಿಯೋಲಿ ಹೇಳಿದ.

"ಚಿಂತೆ ಬಿಡು. ಅವೆಲ್ಲಾ ನಿನಗೆ ಸಿಕ್ಕಿತು ಅಂತಲೇ ಅಂದುಕೊ. ಬೆಳಗ್ಗೆ ನಿನ್ನ ಗಡ್ಡ ಹೆರೆದು, ಮೀಸೆ ತಿದ್ದಲೊಬ್ಬ, ನಿನ್ನ ಉಗುರುಗಳನ್ನು ಕತ್ತರಿಸಿ, ಮಸೆದು ನಯವಾಗಿಸಲು ಒಬ್ಬಳು ಚೆಂದುಳ್ಳಿ ಚೆಲುವೆ! ಏನಂತೀಯಾ?"

ಡ್ರಿಯೋಲಿ ಬಾಯ್ದೆರೆದು ಮುಚ್ಚಲು ಮರೆತು ಹಾಗೇ ನಿಂತ.

"ಅಷ್ಟೇ ಅಲ್ಲ ಕಣಪ್ಪ. ನೀನು ಬೆಳಗ್ಗೆ ಎದ್ದು ಬೆಡ್ ಬಳಿಯ ಗುಂಡಿ ಒತ್ತಿದರೆ ಸಾಕು! ಕಾಫಿ ತಿಂಡಿ ರೆಡಿ!..." ಯಾರೋ ಒಬ್ಬ ವ್ಯಂಗ್ಯದಿಂದ ಹೇಳಿದ.

"ನಾನು ಕ್ಯಾನೆ(Cannes)ಯ ಬ್ರಿಸ್ಟೋಲ್ ಹೊಟೇಲಿನ ಧಣಿ. ನೀನು ಅಲ್ಲಿ ನನ್ನ ಅತಿಥಿಯಾಗಿ ಬರಲು ಆಮಂತ್ರಣವನ್ನೀಯುತ್ತಿದ್ದೇನೆ. ನಿನ್ನ ಜೀವಮಾನದ ಕೊನೆಯವರೆಗೂ ನೀನು ನಮ್ಮಲ್ಲಿಯೇ ಉಳಿದುಕೊಳ್ಳಬಹುದು." ಈ ಪ್ರಲೋಭನೆಗಳು ಡ್ರಿಯೋಲಿಯ ಮನದಾಳಕ್ಕೆ ಇಳಿಯಲು ಅವನು ಅವಕಾಶ ಕೊಟ್ಟು ಸುಮ್ಮನಾದ. ಬಳಿಕ, "ಇದಕ್ಕೆ ಪ್ರತಿಯಾಗಿ ನೀನು ಮಾಡಬೇಕಾಗಿರುವುದು ಇಷ್ಟೇ... ಈಜುಡುಗೆಯಲ್ಲಿ ಕಾಕ್‌ಟೇಲ್‌ಗಳನ್ನು ಸವಿಯುತ್ತಾ, ನಿನ್ನ ಬೆನ್ನನ್ನು ಇತರ ಗಿರಾಕಿಗಳಿಗೆ ಪ್ರದರ್ಶಿಸುತ್ತಾ ಸುತ್ತಾಡಬೇಕು! ಏನಂತೀಯಾ?"



ಡ್ರಿಯೋಲಿ ಪ್ರತಿಕ್ರಿಯಿಸುವ ಮನಃಸ್ಥಿತಿಯಲ್ಲಿರಲಿಲ್ಲ.

"ಗಂಭೀರವಾಗಿ ಯೋಚಿಸು ಗೆಳೆಯ. ನೀನು ತುಂಬಾ ಜನಪ್ರಿಯನಾಗುತ್ತೀಯಾ!"

"ಇದು ನನಗೆ ದೊಡ್ಡ ತಮಾಷೆಯಾಗಿ ಕಾಣಿಸುತ್ತದೆ. ನೀವು ತಮಾಷೆ ಮಾಡುತ್ತಿಲ್ಲ ತಾನೆ?"

"ಮೊನ್ಸಿಯೋರ್, ಖಂಡಿತವಾಗಿಯೂ ಇಲ್ಲ."

"ಇಲ್ಲಿ ಕೇಳಿ ಹಿರಿಯರೇ. ಒಬ್ಬ ನುರಿತ ಶಸ್ತ್ರಚಿಕಿತ್ಸಕರ ಬಳಿ ನಿಮ್ಮ ಬೆನ್ನ ಮೇಲಿನ ಚರ್ಮವನ್ನು ತೆಗೆಸುತ್ತೇನೆ. ಸೂಟಿನನ ಚಿತ್ರಕ್ಕೆ ಪ್ರಸ್ತುತ ಏನು ಬೆಲೆ ಇದೆಯೋ ಅದು ನಿಮಗೆ ಖಂಡಿತ ಸಿಗುತ್ತದೆ. ಅದನ್ನು ಪಡೆದು ನೀವು ಎಲ್ಲಿ ಬೇಕು ಅಲ್ಲಿಗೆ ಹೋಗಬಹುದು... ನನ್ನ ಹಂಗಿನಲ್ಲಿ ಇರಬೇಕಾಗಿಲ್ಲ."

"ನನ್ನ ಬೆನ್ನಿನ ಮೇಲೆ ಚರ್ಮ ಇಲ್ಲದಿದ್ದರೂ ಪರವಾಗಿಲ್ಲ, ನನಗೆ ನಿನ್ನ ದುಡ್ಡೇ ಸಾಕು!" ಡ್ರಿಯೋಲಿ ವ್ಯಂಗ್ಯದಿಂದ ಹೇಳಿದ.

"ಮೊನ್ಸಿಯೋರ್, ನೀವು ತಪ್ಪು ತಿಳಿದಿದ್ದೀರಾ. ನಿಮ್ಮ ಹಳೇ ಚರ್ಮದ ಬದಲು ಹೊಸ ಚರ್ಮವನ್ನು ಹೊದಿಸುತ್ತೇನೆ. ಇದರಲ್ಲೇನೂ ವಿಶೇಷವಿಲ್ಲ."